# ಪುಟಾಣಿ ಸಿಂಹ



■ ಪ್ರವೀಣ ಕುಲಕರ್ಣಿ

ಕೂದಲಿನ ರಾಶಿಯನ್ನು ಹೀಗೆ ಗೊಂಬೆಯಂತೆ ಪೇರಿಸಿಕೊಂಡು ಎಲ್ಲಿಗೆ ಒಯ್ಯುತ್ತಿದ್ದಾರೆ? ನ್ಯೂಯಾರ್ಕ್‌ನಲ್ಲಿ ಕಳೆದ ವಾರ ನಡೆದ ಆ ಪ್ರದರ್ಶನದಲ್ಲಿ ಕೆಲವರಿಗಾದರೂ ಈ ಸಂಶಯ ಬಂದಿರಲಿಕ್ಕೆ ಸಾಕು. ಅದೊಂದು ಪುಟಾಣಿ ‘ಶಿ ಜು’ ಶ್ವಾನ. ಪುಟ್ಟ ಪುಟ್ಟ ಹೆಜ್ಜೆಗಳನ್ನು ಫಟ್ ಫಟ್ ಅಂತ ಹಾಕುತ್ತಾ, ಕನ್ನಡಕದೊಳಗಿನ ಕಣ್ಣುಗಳನ್ನು ಆಚೀಚೆ ಅಲುಗಾಡಿಸುತ್ತಾ, ಈ ಶ್ವಾನ ಹೋಗುತ್ತಿದ್ದರೆ ಕೂದಲಿನ ಪುಟ್ಟ ರಾಶಿಗೆ ಕಾಲು ಬಂದು ನಡೆದುಕೊಂಡು ಹೊರಟಿದೆ ಎಂಬಂತೆ ಭಾಸವಾಗುತ್ತಿತ್ತು. ಪ್ರತಿಷ್ಠಿತ ವೆಸ್ಟ್‌ಮಿನಿಸ್ಟರ್ ಕೆನಲ್ ಕ್ಲಬ್‌ನ ವಾರ್ಷಿಕ ಸ್ಪರ್ಧೆಯಲ್ಲಿ ಮೊದಲ ಮೂರು ಸ್ಥಾನ ಗಳಿಸಿದ ಶ್ವಾನಗಳಲ್ಲಿ ಇದೂ ಒಂದಾಗಿತ್ತು. ಇದೇ ಅವಧಿಯಲ್ಲಿ ಮತ್ತೊಂದು ಶಿ ಜು ಜಗತ್ತಿನಾದ್ಯಂತ ಸುದ್ದಿ ಮಾಡಿತು. ಥಾಯ್ಲೆಂಡ್‌ನ ಪೌರ ಕಾರ್ಮಿಕ ಮಹಿಳೆಯೊಬ್ಬರು, ನಿತ್ಯ ಬೀದಿಯಲ್ಲಿ ಕಸಗುಡಿಸಲು ಹೋಗುವಾಗ ತಮ್ಮ ಶಿ ಜು ಶ್ವಾನವನ್ನು ಬೆನ್ನಹಿಂದೆ ಕೂಸುಮರಿಯಂತೆ ಕಟ್ಟಿಕೊಂಡು ಹೋಗಿದ್ದರು. ಪೌರಕಾರ್ಮಿಕ ಮಹಿಳೆ ಬೀದಿ ಕಸಗುಡಿಸುತ್ತಾ ಹೊರಡುವಾಗ, ಬೆನ್ನಮೇಲೆ ಕುಳಿತಿದ್ದ ಈ ಶ್ವಾನ ಸ್ವಚ್ಛತೆಯ ಸರ್ವೇಕ್ಷಣೆ ನಡೆಸಿದಂತೆ ಎಲ್ಲ ಕಡೆ ನೋಡುತ್ತಿತ್ತು. ಈ ದೃಶ್ಯ, ಸಾಮಾಜಿಕ ಜಾಲತಾಣಗಳಲ್ಲಿ ಹರಿದುಬಂದಿದ್ದೇ ತಡ ಲಕ್ಷಾಂತರ ಜನ ನೋಡಿ ಖುಷಿಪಟ್ಟಿದ್ದರು. ಅಂತೂ ಶಿ ಜು ಸೆಲೆಬ್ರಿಟಿ ಶ್ವಾನವಾಗಿತ್ತು.

ಅದೇ ನೆಪದಲ್ಲಿ ಶಿ ಜು ಇತಿಹಾಸದ ಮೇಲೊಮ್ಮೆ ಕಣ್ಣಾಡಿಸಿದರೆ ಕುತೂಹಲ ಗರಿಗಟ್ಟುತ್ತದೆ. ಈ ಶ್ವಾನದ ಮೂಲ ನಮ್ಮ ಪಕ್ಕದ ದೇಶ, ಹಿಮಾಲಯದ ಕೂಸು ಟಿಬೆಟ್. ಚೀನಾದ ಪೆಕಿಂಗೀಜ್ ಮತ್ತು ಟಿಬೆಟ್‌ನ ಲಾಸಾ ಆಪ್ಸೊ ತಳಿಗಳ ಕೂಡಿಕೆಯಿಂದ ಈ ಹೊಸ ತಳಿ ಸೃಷ್ಟಿಯಾಗಿದೆ. ಮೈತುಂಬಾ ಉದ್ದ ಕೂದಲಿನ, ಮೊಂಡು ಮೂತಿಯ ಈ ಶ್ವಾನಗಳನ್ನು ನೋಡಿದರೆ ಯಾವಾಗಲೂ ಏನೋ ಗಡಿಬಿಡಿಯಲ್ಲಿ ಇದ್ದಂತೆ, ಎದುರಿಗಿದ್ದವರ ಮೇಲೆ ಸಿಟ್ಟು ತೋರುತ್ತಿರುವಂತೆ ಭಾಸವಾಗುತ್ತದೆ. ಆದರೆ, ಇದು ಶ್ವಾನಪ್ರಿಯರ ಪಾಲಿಗೆ ಮುದ್ದುಮರಿ. ಚೀನಿಯರು ಈ ಶ್ವಾನದ ತಲೆ, ಗೂಬೆಯ ತಲೆಯಂತೆ (ಸಿಂಹಕ್ಕೆ ಹೋಲಿಸುವುದೂ ಇದೆ) ಇದೆಯೆಂದೂ ಅದರ ಬಾಯಿ, ಕಪ್ಪೆಯ ಬಾಯಿಯಂತೆ ಇದೆಯೆಂದೂ ಹೇಳುತ್ತಾರೆ. ಇದೊಂದು ತುಂಬಾ ಗಿಡ್ಡತಳಿಯ ಶ್ವಾನ. ಪುಟಾಣಿ ಸಿಂಹ ಎಂಬುದನ್ನು ಇದರ ಹೆಸರು ಸೂಚಿಸುತ್ತದೆ. ಚೀನಾದ ಅತ್ಯಂತ ಸುಂದರ ಯುವತಿ ಎನಿಸಿದ್ದ ಷಿ ಶಿ ಹೆಸರನ್ನೇ ಈ ಶ್ವಾನಕ್ಕೂ ಇಡಲಾಗಿದೆ ಎಂಬ ಮಾತೂ ಚಾಲ್ತಿಯಲ್ಲಿದೆ. ಚೀನಾದ ರಾಜರಿಗೆ, ಅದರಲ್ಲೂ ಮಿಂಗ್ ವಂಶದವರಿಗೆ ಶ್ವಾನಗಳೆಂದರೆ ಪಂಚಪ್ರಾಣವಂತೆ. ಅವರ ಅರಮನೆಯಲ್ಲಿ ಶಿ ಜು ಶ್ವಾನಗಳು ಸಹ ದೊಡ್ಡ ಸಂಖ್ಯೆಯಲ್ಲಿ ಇದ್ದವಂತೆ. ರಾಜರನ್ನು ಮೆಚ್ಚಿಸಲು ಮಂತ್ರಿಗಳೂ ಶಿ ಜುಗಳನ್ನು ಸಾಕಿ, ಅರಮನೆ ಪರಿವಾರಕ್ಕೆ ತುಂಬಾ ಹತ್ತಿರವಾಗುವ ದಾರಿಯನ್ನು ಕಂಡುಕೊಂಡಿದ್ದರಂತೆ.

ಯೂರೋಪ್‌ನತ್ತ ಈ ಶ್ವಾನ ಯಾವಾಗ ಪಯಣ ಬೆಳೆಸಿತು? ಚರಿತ್ರೆಕಾರರು ಅದರ ಕರಾರುವಾಕ್ಕಾದ ಮಾಹಿತಿಯನ್ನೂ ಇಟ್ಟಿದ್ದಾರೆ. 1920ರ ದಶಕದಲ್ಲಿ (ನಿಖರವಾಗಿ ಹೇಳುವುದಾದರೆ 1928ರಲ್ಲಿ) ಶಿ ಜು ಮೊದಲ ಬಾರಿಗೆ ಯೂರೋಪ್ ನೆಲದಲ್ಲಿ ಕಾಲಿಟ್ಟಿತು. ಚೀನಾದಲ್ಲಿ ವಾಸವಾಗಿದ್ದ ಲೇಡಿ ಬೌರಿಂಗ್ ಎಂಬುವವರು ಇಂಗ್ಲೆಂಡ್‌ಗೆ ವಾಪಸ್ ಹೋಗುವಾಗ ಶಿ ಜು ಜೋಡಿಯನ್ನೂ ಜತೆಗೆ ಕರೆದೊಯ್ದರು. ಕೆಲವೇ ವರ್ಷಗಳಲ್ಲಿ ಈ ಶ್ವಾನ ತಳಿ ಯೂರೋಪಿನಾದ್ಯಂತ ಪಸರಿಸಿ, ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಅಮೆರಿಕಕ್ಕೂ ದಾಂಗುಡಿ ಇಟ್ಟಿತು. ಯುದ್ಧ ಮುಗಿಸಿ ವಾಪಸ್ ಆಗುವಾಗ ಅಮೆರಿಕದ ಸೇನಾಪಡೆಗಳ ಮುಖ್ಯಸ್ಥರು ಶಿ ಜುಗಳನ್ನೂ ಜತೆಗೆ ತಂದಿದ್ದರು. ಹೀಗೆ ಜಗದಗಲ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದ ಶಿ ಜುವಿಗೆ ಜಗತ್ತಿನ ಹಲವು ದೇಶಗಳಲ್ಲಿ ಅಭಿಮಾನಿಗಳ ಕ್ಲಬ್‌ಗಳು ಇವೆ.

ಚೀನಾದಲ್ಲಿ ವೇಗವಾಗಿ ಅಭಿವೃದ್ಧಿ ಹೊಂದಿದ ತಳಿ ಇದು. ಸೋಜಿಗವೆಂದರೆ 1949ರಲ್ಲಿ ಚೀನಾದಲ್ಲಿ ನಡೆದ ಕಮ್ಯುನಿಸ್ಟ್ ಕ್ರಾಂತಿಯಲ್ಲಿ ದೇಶದಲ್ಲಿದ್ದ ಎಲ್ಲ ಶಿ ಜು ಶ್ವಾನಗಳನ್ನು ನಿರ್ದಯವಾಗಿ ಕೊಲ್ಲಲಾಯಿತು. ಈ ಶ್ವಾನ ತಳಿಯನ್ನು ಶ್ರೀಮಂತಿಕೆಯ ಸಂಕೇತ ಎಂದು ಚಳವಳಿಗಾರರು ಪರಿಭಾವಿಸಿದ್ದೇ ಅವುಗಳ ಸಾಮೂಹಿಕ ಸಂಹಾರಕ್ಕೆ ಕಾರಣವಾಯಿತು. ಹೀಗಾಗಿ ಈಗಿನ ಶಿ ಜುಗಳ ಮೂಲಬೀಡನ್ನು ಯೂರೋಪ್ ಎಂದೇ ಗುರ್ತಿಸಬಹುದು.

ಬೌದ್ಧಮತದಲ್ಲಿ ಸಿಂಹಕ್ಕೆ ಎಲ್ಲಿಲ್ಲದ ಪ್ರಾಧಾನ್ಯ. ‘ಯಾವುದಕ್ಕೂ ಅಂಜಬೇಡ, ವಿಳಂಬವಿಲ್ಲದೆ ಪ್ರತಿಕ್ರಿಯಿಸು’ ಎಂಬ ಸಂದೇಶವನ್ನು ಸಿಂಹ ಸಾರುತ್ತದಂತೆ. ಹೀಗಾಗಿ ಬೌದ್ಧಮತ ಅನುಸರಿಸುತ್ತಿದ್ದ ಚೀನಾದ ರಾಜರು, ಅಲ್ಲಿನ ಆಲಯಗಳು, ಗೋರಿಗಳ ಮುಂಭಾಗದಲ್ಲಿ ಸಿಂಹದ ಪ್ರತಿಮೆ ಇರುತ್ತಿದ್ದುದು ವಾಡಿಕೆ. ಶಿ ಜುಗಳನ್ನು ಅಂತಹ ಸಿಂಹಗಳ ಪುಟ್ಟರೂಪವೆಂದು ಅಥವಾ ಶಿ ಜುಗಳ ವಿರಾಟ್ ರೂಪವೇ ಸಿಂಹವೆಂದು ಚೀನಿಯರು ನಂಬುತ್ತಾರೆ.

ಸಂತಸವನ್ನು ಹಂಚುವ ಶ್ವಾನಗಳು ಎಂದೂ ಶಿ ಜುಗಳನ್ನು ಗುರ್ತಿಸಲಾಗುತ್ತದೆ. ಪುಟಾಣಿ ಸಿಂಹ ಎಂಬ ಹೆಸರಿಗೆ ತಕ್ಕಂತೆ ಶಿ ಜುಗಳು ಯಾವುದಕ್ಕೂ ಅಂಜುವುದಿಲ್ಲ. ಸ್ವಾವಲಂಬಿಗಳಾಗಿ ಇರಲು ಬಯಸುವ ಶ್ವಾನಗಳಿವು. ಎಂತಹ ಪ್ರದೇಶಕ್ಕೆ ಬೇಕಾದರೂ ಸುಲಭವಾಗಿ ಹೊಂದಿಕೊಳ್ಳುತ್ತವೆ. ಮೈಮೇಲಿನ ಕೂದಲಿನ ರಾಶಿಯಿಂದ ಈ ಶ್ವಾನಕ್ಕೆ ಎಷ್ಟು ಅನುಕೂಲಗಳಿವೆಯೋ ಅಷ್ಟೇ ತೊಂದರೆಗಳೂ ಇವೆ. ಕಿವಿ ಮತ್ತು ಕಣ್ಣಿಗೆ ಸಂಬಂಧಿಸಿದ ಕಾಯಿಲೆಗಳು ಇವುಗಳಿಗೆ ಬಹುಬೇಗ ಆವರಿಸುತ್ತವಂತೆ. ಮೈಮೇಲಿನ ಕೂದಲನ್ನು ಸ್ವಚ್ಛವಾಗಿ ಇಡದಿದ್ದರೆ ಚರ್ಮರೋಗವೂ ಹೆಚ್ಚು ಬಾಧಿಸುತ್ತದೆ. ಹೀಗಾಗಿ ವಾರಕ್ಕೆ ಮೂರು ಬಾರಿಯಾದರೂ ಇವುಗಳ ಸ್ನಾನ ಆಗಬೇಕು. ಅದೇ ಕಾರಣದಿಂದ ಹೆಚ್ಚು ಸ್ವಚ್ಛವಾಗಿರುವ ಶ್ವಾನ ಎಂಬ ಪಟ್ಟವನ್ನೂ ಕಟ್ಟಿಕೊಂಡಿದೆ. ಮನೆಯಲ್ಲಿ ಮಾಲೀಕನ ಜತೆಗಿನ ನಂಟಿನಿಂದ ಮನಗೆಲ್ಲುವ ಈ ಶ್ವಾನ ಈಗ ಭಿನ್ನ ಕಾರಣಗಳಿಗಾಗಿ ಜಗತ್ತಿನ ಕಣ್ಮಣಿಯೂ ಆಗಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65